## ಕಾಗೆ ಮತ್ತು ಹೂಜಿ

ಶಿವಮೊಗ್ಗದಲ್ಲಿ ತೋಟಗಾರಿಕಾ ಇಲಾಖೆ ಆಯೋಜಿಸಿದ್ದ ಫಲಪುಷ್ಪ ಪ್ರದರ್ಶನದಲ್ಲಿ ಕಂಡುಬಂದ ಬರಗಾಲ ಸ್ಥಿತಿ ಬಿಂಬಿಸುವ ಕಾಗೆ ಮತ್ತು ಹೂಜಿ. ಕಾಗೆಯೊಂದು ನೀರಿಗಾಗಿ ಹಾತೊರೆಯುತ್ತಾ ಹೂಜಿಯ ತಳದ ನೀರನ್ನು ಕಂಡು ಅದಕ್ಕೆ ಕಲ್ಲುಗಳನ್ನು ಹಾಕಿ... ನೀರು ಕುಡಿಯುವ ಮಕ್ಕಳ ಕಥೆಯನ್ನು ಸ್ಮರಿಸುವ ದೃಶ್ಯದ ಹೂವಿನ ಹೂಜಿ ಕಣ್ಮನ ಸೆಳೆಯುವಂತಿತ್ತು.

**-ಜಯಪುರ ಪ್ರಭಾ. ಪಿ. ಶಾಸ್ತ್ರಿ,**
**ಶಿವಮೊಗ್ಗ**





## ಕಲೆಯ ಬಲೆ

'ಶಿಲೆಯಲ್ಲ ಈ ಗುಡಿ ಕಲೆಯ ಬಲೆ' ಎಂದು ಕೈ ಬೀಸಿ ಕರೆಯುತ್ತಿದೆ ನ್ಯೂಜರ್ಸಿ (ಯು.ಎಸ್.ಎ.)ಯಲ್ಲಿರುವ ಸುಂದರ ಮಂದಿರ 'ಅಕ್ಷರ ಧಾಮ'.

**-ಶ್ರೀಧರ ರಾಯಸಂ, ಬೆಂಗಳೂರು**

## ಪರಿಸರದಲ್ಲಿಯ ಪ್ರತಿಕೃತಿ

ಕೃಷಿ ಕಾಯಕದ ನಡುವೆ ಬಿಡುವಿರುವುದು ಅಪರೂಪ. ಆದರೆ ಬಿಡುವಿನ ಸಮಯದಲ್ಲಿ ವಿಶಿಷ್ಟ ವಿನ್ಯಾಸದ ವಸ್ತುಗಳನ್ನು ರೂಪಿಸುವಲ್ಲಿ ಉತ್ತರಕನ್ನಡದ ಯಲ್ಲಾಪುರ ತಾಲ್ಲೂಕಿನ ವಜ್ರಳ್ಳಿಯ ರಾಮಾಗೌಡ ಸಿದ್ಧ ಹಸ್ತರು. ವಿವಿಧ ಪ್ರಾಣಿ, ಪಕ್ಷಿ, ಕ್ರಿಮಿಕೀಟಗಳಂತಹ ಜೀವ ಜಂತುಗಳ ಪ್ರತಿಕೃತಿಯನ್ನು ನೈಜವಾಗಿ ರೂಪಿಸುವ ಪ್ರತಿಭೆ ಅವರದು. ಕಾಗದದ ಕಸ, ಒಣಗಿದ ಎಲೆ, ಬೇರು, ಒಣಹುಲ್ಲು, ತರಕಾರಿ ಬೀಜ ಹೀಗೆ ಪರಿಸರದಲ್ಲಿಯ ಸಂಪನ್ಮೂಲಗಳನ್ನೇ ಬಳಸಿ ಆಕರ್ಷಕ ಕಲಾಕೃತಿ ತಯಾರಿಸಬಲ್ಲರು. ಕಾಗದದ ತಲೆಗೆ ಬಣ್ಣ ಹಚ್ಚಿ ಕೋಳಿಯ ಗರಿಗಳನ್ನು ಅಂಟಿಸಿದ ಈ ಚಿತ್ರದ ಕೋಳಿ ರಾಮಾಗೌಡರ ಕಲಾಕೃತಿಯಾಗಿದೆ. ಇಂತಹ ಸಾವಿರಾರು ಕಲಾಕೃತಿ ಇವರ ಬಳಿ ಇದೆ.

**ಚಿತ್ರ-ಬರಹ: ದತ್ತಾತ್ರಯ ಭಟ್ಟ, ಕಣ್ಣಿಪಾಲ,**
**ಯಲ್ಲಾಪುರ**

